**ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ಧಾರವಾಡ**

ಸಿ ಸಿ ನಂ.ಃ **2492/2023**

ಪಿ ಡಬ್ಲ್ಯೂ ಃ**- 02**
ಸಿ ಡಬ್ಲ್ಯೂ **:- 03**

ದಿನಾಂಕಃ**-03-07-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ವಿಷ್ಣು ಕಿಳ್ಳಿಕೇತರ |
| ತಂದೆಯ ಹೆಸರು | ನಾರಾಯಣ ಕಿಳ್ಳಿಕೇತರ |
| ವಯಸ್ಸು | 31 ವರ್ಷ |
| ಉದ್ಯೋಗ | ಕ್ರೇನ್ ಚಾಲಕ |
| ವಿಳಾಸ | ಬೆಣಚಿ |

ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ ಃ-

ಸಾಕ್ಷಿಯು ಈಗಾಗಲೇ ಗುರುತಿಸಲಾದ ನಿಪಿ-1 ರೇಡ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರೀ ಸಾಕ್ಷಿಯ ಸಹಿಯನ್ನು **ನಿ.ಪಿ.1(ಬಿ)** ಎಂದು ಗುರುತಿಸಲಾಯಿತು. ನಿ.ಪಿ.1 ಕ್ಕೆ ನಾನು ಅಳ್ನಾವರ ಪೋಲಿಸಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ.1 ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ. ನಿ.ಪಿ.1 ಕ್ಕೆ ನಾನು ಪೋಲಿಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪೋಲಿಸರು ನನ್ನ ಸಮಕ್ಷಮ ಯಾವುದೇ ಮುದ್ದೆಮಾಲುಗಳನ್ನು ಜಪ್ತಿ ಮಾಡಿಕೊಂಡಿರುವುದಿಲ್ಲ.

ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.

ಪಾಟೀ ಸವಾಲು ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದ:-

ದಿಃ 04-02-2023 ರಂದು ಚಾಸಾ-1 ರವರು ನಮಗೆ ಪಂಚರು ಅಂತಾ ಅಳ್ನಾವರ ಪೋಲಿಸ ಠಾಣೆಗೆ ಕರೆಯಿಸಿ ತಮಗೆ ಬಂದ ಬಾತ್ಮಿಯಲ್ಲಿ ಬೆಣಚಿ ಗ್ರಾಮದ ಬಸ ನಿಲ್ದಾಣದ ಎದುರಿಗೆ ಒಬ್ಬ ವ್ಯಕ್ತಿ ತನ್ನ ಪಾಯಿದೆಗೋಸ್ಕರ ಸರಾಯಿ ಪ್ಯಾಕೇಟಗಳನ್ನು ಮಾರಾಟ ಮಾಡುತ್ತಿದ್ದಾನೆ ಎಂದು ತಿಳಿಸಿ ರೇಡ ಕಾಲಕ್ಕೆ ಹಾಜರಿದ್ದು ಪಂಚನಾಮೆಯನ್ನು ಬರೆಯಿಸಿಕೊಡಲು ಕೇಳಿಕೊಂಡ ಪ್ರಕಾರ ನಾವು ಪಂಚರು ಅಂತಾ ಒಪ್ಪಿಕೊಂಡು ಹಾಜರಿದ್ದೇವು ಎಂದರೆ ಸರಿಯಲ್ಲ. ಪೋಲಿಸರು ನನ್ನ ಮತ್ತು ಚಾಸಾ-2 ರವರ ಸಮಕ್ಷಮದಲ್ಲಿ 90 ಎಂ.ಎಲ್ ದ ಒಟ್ಟು 32 ಓರಿಜನಲ್ ಚಾಯ್ಸ ವಿಸ್ಕಿ ತುಂಬಿದ ಟೇಟ್ರಾ ಪ್ಯಾಕೇಟಗಳು ಅವುಗಳ ಬೆಲೆ ರೂ.1,100/- ಇವುಗಳನ್ನು ಸಾಯಂಕಾಲ 5.00 ಗಂಟೆಯಿಂದ 6.00 ಗಂಟೆಯವರೆಗೆ ನಿಪಿ-1 ರಂತೆ ಪಂಚನಾಮೆ ಮಾಡಿ ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿರುವ ವಿಷಯಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ- ಆರೋಪಿ ಪರ ವಕೀಲರು ಹಾಜರು ಇದ್ದು, ಪಾಟೀಸವಾಲು ಏನೂ ಇಲ್ಲ ಎಂದು ನುಡಿದಿರುತ್ತಾರೆ.

ಮರು ವಿಚಾರಣೆ ಃ- ಇರುವುದಿಲ್ಲ.

**(ತೆರೆದ ನ್ಯಾಯಾಲಯುದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,

ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ. ಎಂ. ಎಫ್. ಸಿ. **ಧಾರವಾಡ**.